ದಿನಾಂಕ 17-08-2022 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಶ್ರೀ.ಆರ್.ಎನ್.ಡಿ ವಕೀಲರಿಂದ ಅರ್ಜಿದಾರ ಪರ**

1. ಓ.ಎಸ್.ನಂ.86/2013 ರಲ್ಲಿ ಸಮನ್ಸ ಬಂದ ನಂತರ ದಾವೆಯನ್ನು ಯಾರು ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಸದರಿ ದಾವೆಯನ್ನು ಯಾರ ವಿರುದ್ಧ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾವ ಯಾವ ದಾವಾ ಆಸ್ತಿಗಳ ಮೇಲೆ ಸದರಿ ದಾವೆ ಹಾಕಿದ್ದಾರೆ ಎಂದು ತಿಳಿದುಕೊಂಡಿಲ್ಲ. ಸರ್ವೆ ನಂ.1/1+2+3+4ಬಿ ನಮಗೆ ಸೇರಿದ್ದರಿಂದ ಈ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಲು ಅರ್ಜಿ ಸಲ್ಲಿಸಿದ್ದೇನೆ. ಈಗ ನಾನು ಹೇಳಿದ ಆಸ್ತಿ ದಾವೆಯಲ್ಲಿ ಶೆಡ್ಯೂಲ್ ಆಸ್ತಿ ಆಗಿತ್ತೋ ಇಲ್ಲವೋ ಅನ್ನುವುದು ನನಗೆ ಗೊತ್ತಿಲ್ಲ. ಅರ್ಜಿದಾರರ ಮನೆತನಕ್ಕೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಮಾಹಿತಿ ಇಲ್ಲ. ಸರ್ವೆ ನಂ.1 ಸಂಪೂರ್ಣ ತುಪ್ಪದ ಇವರ ಮನೆತನದ ಆಸ್ತಿ ಎಂದರೆ ಸರಿ. ಸರ್ವೆ ನಂ.1 ಕ್ಕೆ ಸಂಬಂಧಿಸಿದಂತೆ ತುಪ್ಪದ ಇವರ ಮನೆತನದಲ್ಲಿ ಪಾಲು ವಿಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.1 ರಲ್ಲಿ ಎಷ್ಟು ಹಿಸ್ಸಾಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.1 ರಲ್ಲಿ ಪಟ್ಟಿಗಳು ಆಗಿವೆ. ಸದರಿ ಪಟ್ಟಿಗಳ ಪ್ರಕಾರ ಅವರು ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ. ಸದರಿ ಪಟ್ಟಿಗಳು ಯಾವ ಇಸ್ವಿಯಲ್ಲಿ ಆಗಿವೆ ಎಂದು ನನಗೆ ಗೊತ್ತಿಲ್ಲ. ಓ.ಎಸ್.ನಂ.86/2013 ರಲ್ಲಿ ನಮ್ಮ ತಂದೆ ಪಕ್ಷಗಾರರು ಆಗಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದ ಪತ್ರ ಹಾಕಲು ನ್ಯಾಯಾಲಯ ಸಾಕಷ್ಟು ಅವಕಾಶ ಕೊಟ್ಟಿತ್ತು ಎಂದರೆ ಸಾಕ್ಷಿ ಕೊಟ್ಟಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಓ.ಎಸ್.ನಂ.86/2013 ನ್ನು ಯಾರು ಯಾರ ಮೇಲೆ ಹಾಕಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ಸದರಿ ದಾವೆಯಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ನಾನು ತಿಳಿದುಕೊಂಡು ಬಂದಿಲ್ಲ. ಸದರಿ ದಾವೆ ಡಿಕ್ರಿ ಆಗಿದೆ ಎಂದರೆ ಸರಿ. ಯಾವ ಯಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ಡಿಕ್ರಿ ಆಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಯಾರ ಯಾರ ವಿರುದ್ಧ ಡಿಕ್ರಿ ಆಗಿದೆ ಮತ್ತು ಯಾರು ವಿರುದ್ಧ ವಜಾ ಆಗಿದೆ ಎಂದು ನಾನು ತಿಳಿದುಕೊಂಡಿಲ್ಲ. ನಾನು ಈ ದಾವೆಯಲ್ಲಿ ಯಾವ ಯಾವ ದಾಖಲಾತಿಗಳನ್ನು

ಹಾಜರಪಡಿಸಿದ್ದೇನೆ ಎಂದು ನನಗೆ ಗೊತ್ತಿದೆ. ನಿಆರ್.-2 ಯಾವ ದಾವೆಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ಎಫ್.ಡಿ.ಪಿ ಕೇಸನ್ನು ಯಾರು ಯಾರ ವಿರುದ್ಧ ಹಾಕಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಯಾವ ಆಸ್ತಿಗಳಗೆ ಸಂಬಂಧಿಸಿದಂತೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅಳತೆ ಮಾಡಲು ಬಂದಾಗ ಈ ಕೇಸಿನ ಬಗ್ಗೆ ಗೊತ್ತಾಗಿದೆ ಎಂದು ಹೇಳುತ್ತಾರೆ.

2. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಂತಹ ವಿಷಯಗಳು ನನಗೆ ಗೊತ್ತಿದೆ. ದಿ:25.06.1932 ರಂದು ಸರ್ವೆ ನಂ.1/1+2+3+4/ಬಿ ರಲ್ಲಿ 5 ಗುಂಟಾ ಜಮೀನನ್ನು ಓ.ಎಸ್.ನಂ.86/2013 ರಲ್ಲಿಯ ಪ್ರತಿವಾದಿ-12 ರಿಂದ ಕ್ರಯಕ್ಕೆ ತೆಗೆದುಕೊಂಡಿದ್ದೇವೆ ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಪಟ್ಟಂತಹ 1932 ರ ಪಹಣಿಯನ್ನು ಹಾಜರಪಡಿಸಿಲ್ಲ. 1932 ರಲ್ಲಿ ಸರ್ವೆ ನಂ.1 ರಲ್ಲಿ ಎಷ್ಟು ಹಿಸ್ಸೆಗಳು ಇದ್ದವು ಎಂದು ತೋರಿಸಲು ದಾಖಲಾತಿಗಳನ್ನು ಹಾಜರಪಡಿಸಿಲ್ಲ. ನಿ.ಆರ್.-3 ರಲ್ಲಿ ಸರ್ವೆ ನಂ.1/1+2+3+4/ಬಿ ರಲ್ಲಿ 5 ಗುಂಟಾ ಜಮೀನು ಎಂದು ಬರೆದಿಲ್ಲ ಎಂದರೆ ಸರಿ. ಸರ್ವೆ ನಂ.1 ರಲ್ಲಿ ಒಟ್ಟು ಕ್ಷೇತ್ರ 6 ಎಕರೆ ಸ್ವಲ್ಪ ಗುಂಟಾ ಇದೆ. ನಿ.ಆರ್.-3 ರಲ್ಲಿ 6 ಎಕರೆ ಜಮೀನು ಎಂದು ನಮೂದಿಸಿಲ್ಲ. ನಿ.ಆರ್-3 ಮೋಡಿ ಭಾಷೆಯಲ್ಲಿ ಇದೆ ಎಂದರೆ ಸರಿ. ನಿ.ಆರ್.-3ಎ ಕನ್ನಡ ಭಾಷೆಗೆ ಮಹಾದೇವ ರಾಮಚಂದ್ರ ಕಾಂಬಳೆ ಅನುವಾದ ಮಾಡಿದ್ದಾರೆ. ಸದರಿಯವರು ಸರ್ಕಾರದಿಂದ ನೇಮಕಗೊಂಡವರು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿಯವರ ಸಾಕ್ಷ್ಯ ಈ ಕೇಸಿನಲ್ಲಿ ಮಾಡಿಸಿಲ್ಲ. ಸರ್ವೆ ನಂ.1/1+2+3+4/ಬಿ ನನ್ನ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಪಹಣಿಗಳು 1982-83 ರಲ್ಲಿ ಬೇರೆ ಬೇರೆಯಾಗಿ ಬರುತ್ತಿವೆ. 1932 ರಲ್ಲಿ ಖರೀದಿಯಾದಗಿನಿಂದ ಇಲ್ಲಿಯವರೆಗೆ ಎಷ್ಟು ಹಿಸ್ಸೆಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.1 ನಂದಿಕೇಶ್ವರ ದೇವಸ್ಥಾನಕ್ಕೆ

ಹೊಂದಿಕೊಂಡಂತೆ ಇದೆ ಎಂದರೆ ಸರಿ. ಸರ್ವೆ ನಂ.1 ಹಿಂಭಾಗದಲ್ಲಿ ಒಂದು ದೊಡ್ಡ ಬಾವಿ ಇದೆ ಎಂದರೆ ಸರಿ. 1956 ರಲ್ಲಿ ಸರಕಾರದವರು ಸರ್ವೆ ನಂ.1 ನ್ನು ತುಂಡು ಜಮೀನು ಎಂದು ಘೋಷಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತುಂಡು ಜಮೀನುಗಳನ್ನು ಸರಕಾರದವರು ತಮ್ಮ ವಶಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿ:11-09-1957 ರಲ್ಲಿ ಸರಕಾರದವರು ಬಿ.ಪಿ.ಎಫ್ ಅಡಿಯಲ್ಲಿ ಯಾರು ಯಾರು ಅರ್ಜಿ ಕೊಟ್ಟಿದ್ದರು ಅವರಿಗೆ ಮಂಜೂರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ತುಂಡು ಜಮೀನು ಡೈರಿ ನಂ.5453 ರ ಪ್ರಕಾರ ಕಂದಾಯ ದಾಖಲಾತಿಗಳಲ್ಲಿ ದಾಖಲು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.1/1+2+3+4/ಬಿ ಜಮೀನನ್ನು ಯಾರಿಗೆ ಮಂಜೂರು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.1/1+2+3+4/ಬಿ ರ ಜಮೀನು ನನಗೆ ಸಂಬಂಧಪಟ್ಟಿದ್ದು ಅಲ್ಲ ಅನ್ನುವುದು ಸರಿಯಲ್ಲ. 1932 ರಿಂದ 1956 ರವರೆಗೆ ಸದರಿ ಜಮೀನಿನ ಪಹಣಿ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. 1957 ರಿಂದ ಇಲ್ಲಿಯವರೆಗೆ ಯಾರ ಹೆಸರಿನಲ್ಲಿ ಇದೆ ಎಂದು ಕೇಳಿ ತಿಳಿದುಕೊಂಡಿಲ್ಲ. ಸರ್ವೆ ನಂ. 1/1+2+3+4/ಕ ನನ್ನ ಹೆಸರಿನಲ್ಲಿ ಇದೆ. ಸದರಿ ಜಮೀನು ಸಹ 5 ಗುಂಟಾ ಇದೆ. ಖರೀದಿ ಆಧಾರದ ಮೇಲೆ ನನ್ನ ಹೆಸರಿಗೆ ಸದರಿ ಜಮೀನು ಬಂದಿದೆ. ಬಸಲಿಂಗವ್ವ ಶಿವಲಿಂಗಪ್ಪ ಅರಕೇರಿ ಉರ್ಪ ಜಮಾದಾರ ಇವರ ಹೆಸರಿನಲ್ಲಿ ಸರ್ವೆ ನಂ. 1/1+2+3+4/ಕ ಖರೀದಿ ಆಗಿದೆ. ಸದರಿಯವರು ಮೃತವಾದ ನಂತರ ನನ್ನ ತಂದೆ ಹಾಗೂ ನನ್ನ ತಂದೆಯ ಅಕ್ಕ-ತಂಗಿಯರ ಹೆಸರಿನಲ್ಲಿ ವಾರಸಾ ಆಧಾರದ ಮೇಲೆ ಪಹಣಿಗಳು ಹೆಸರಿನಲ್ಲಿ ಬಂದಿವೆ. ನನ್ನ ತಂದೆಯ ಸಹೋದರಿಯರು ನಮ್ಮ ತಂದೆಗೆ ಹಕ್ಕುಬಿಟ್ಟುಕೊಟ್ಟಿದ್ದಾರೆ. ಈಗ ಒಂದು ಪಹಣಿಯನ್ನು ಅರ್ಜಿದಾರ ಪರ ವಕೀಲರು ಸಾಕ್ಷಿಗೆ ತೋರಿಸಿದ್ದು ಸದರಿ ಪಹಣಿಯಲ್ಲಿ ಶಿವಲಿಂಗಪ್ಪ ಅರಕೇರಿ ಎಂದು ನಮೂದಿಸಿದ್ದು ಒಪ್ಪಿಕೊಂಡಿದ್ದು ಸದರಿ ದಾಖಲೆಯು ನಿಪಿ-1 ಎಂದು ಗುರುತಿಸಲಾಯಿತು. ನಿ.ಆರ್-3ಎ ಓದಿ ತಿಳಿದುಕೊಂಡಿದ್ದೇನೆ. ಸದರಿ ಖರೀದಿ ಪತ್ರದಲ್ಲಿ ಸರ್ವೆ ನಂ.1 ಕ್ಕೆ ಸಂಬಂಧಿಸಿದಂತೆ ನಮ್ಮ ಮನೆತನ ಮತ್ತು ತುಪ್ಪದ

ಇವರ ಮನೆತನಕ್ಕೆ ಬಾವಿಯಿಂದ ನೀರು ತೆಗೆಯುವ ಹಕ್ಕು ಮಾತ್ರ ಎಂದು ನಿ.ಆರ್.–3 ಎ ದಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಮಗೆ ಸದರಿ ಬಾವಿಯಿಂದ ನೀರು ತೆಗೆಯುವ ಹಕ್ಕು ಮಾತ್ರ ಇತ್ತು ಎಂದರೆ ಸರಿ. ಸರ್ವೆ ನಂ. 1/1+2+3+4/ಬಿ ದಲ್ಲಿ ಜಮೀನು ನನ್ನದು ಎಂದು ದಾಖಲು ಮಾಡಲು ಅರ್ಜಿಯನ್ನು ಕೊಟ್ಟಿಲ್ಲ. ನಿಪಿ–1 ರ ಪ್ರಕಾರ ನಮ್ಮ ಅಜ್ಜಿಯ ಹೆಸರಿನಲ್ಲಿ 1932 ರಲ್ಲಿ ಆಗಿದೆ. 1932 ರಲ್ಲಿ ದಾಖಲು ಆಗಿದೆ ಎಂದು ತೋರಿಸಲು ದಾಖಲಾತಿ ಹಾಜರಪಡಿಸಿಲ್ಲ. ನಮ್ಮ ಅಜ್ಜಿ ಮೃತಪಟ್ಟ ನಂತರ ನಮ್ಮ ತಂದೆ ಮತ್ತು ಅವರ ಸಹೋದರಿಯರ ಹೆಸರಿನಲ್ಲಿ ಆದಂತಹ ಕಂದಾಯ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಿಲ್ಲ. ನಮ್ಮ ಹೆಸರಿಗೆ ಮಾಡಿಕೊಂಡಂತಹ ಕಂದಾಯ ದಾಖಲಾತಿಗಳನ್ನು ಹಾಜರಪಡಿಸಿಲ್ಲ. ಸರ್ವೆ ನಂ.1/1+2+3+4/ಬಿ ಜಮೀನು ಮಲ್ಲಪ್ಪ ಇವರಿಂದ ಖರೀದಿ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಸಲಿಂಗವ್ವನ ಹೆಸರಿನಲ್ಲಿ ಖರೀದಿ ಆಗಿದೆ ಎಂದು ಹೇಳುತ್ತಾರೆ. ಬಸಲಿಂಗವ್ವನ ಹೆಸರಿನಲ್ಲಿ ಆದಂತಹ ಕಂದಾಯ ದಾಖಲಾತಿಗಳನ್ನು ಹಾಜರಪಡಿಸಿಲ್ಲ. ನಮ್ಮ ತಂದೆಯವರ ಹೆಸರಿನಲ್ಲಿ ಆದಂತಹ ಕಂದಾಯ ದಾಖಲಾತಿಗಳನ್ನು ಹಾಜರಪಡಿಸಿಲ್ಲ.

3. ವಾದಿಯರ ಮನೆತನದ ಮೂಲ ಪುರುಷ ಮಲ್ಲೇಶಪ್ಪ ಎಂದರೆ ಸರಿ. ಮಲ್ಲೇಶಪ್ಪನಿಗೆ 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರ ಬಸಪ್ಪ ಇವರ ಮಗ. ನನ್ನ ಹೆಂಡತಿ ತುಪ್ಪದ ಮನೆತನದ ಹೆಣ್ಣುಮಗಳು ಎಂದರೆ ಸರಿ. ಓ.ಎಸ್.ನಂ.86/2013 ರಲ್ಲಿ ನನ್ನ ಹೆಂಡತಿ ಪ್ರತಿವಾದಿ ಆಗಿದ್ದಳು ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಸರ್ವೆ ನಂ.1/1+2+3+4/ಬಿ ನ್ನು ಓ.ಎಸ್.ನಂ.86/2013 ರಲ್ಲಿ ವಾದಿ ಮತ್ತು ಪ್ರತಿವಾದಿ–1 ರಿಂದ 4 ರವರಿಗೆ ಭಾಗ ಹೋಗಬೇಕು ಎಂದು ಡಿಕ್ರಿ ಆಗಿದೆ ಎಂದರೆ ಸಾಕ್ಷಿ ಆಗಿರಬಹುದು ಎಂದು ಹೇಳುತ್ತಾರೆ. ಅದೇ ರೀತಿ ಪ್ರತಿವಾದಿ–5 ರಿಂದ ಪ್ರತಿವಾದಿ–27 ರವರೆಗೆ ಸ್ವತ್ತುಗಳಲ್ಲಿ ಭಾಗ ಇಲ್ಲ ಎಂದು ವಜಾ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆಗಿದೆ ಎಂದು ಹೇಳುತ್ತಾರೆ. ಸರ್ವೆ ನಂ.1/1+2+3+4/ಬಿ

**ರಲ್ಲಿ ನಮ್ಮ ತಂದೆ ಮಲ್ಲಪ್ಪನಿಗೆ ಯಾವುದೇ ಭಾಗ ಬರುವುದಿಲ್ಲ ಎಂದು ಆದೇಶ ಆಗಿದೆ ಎಂದರೆ ಸಾಕ್ಷಿ ಆಗಿರಬಹುದು ನಮಗೆ ಅಳತೆ ಮಾಡಲು ಈ ಕೇಸಿನ ಬಗ್ಗೆ ಗೊತ್ತಾಗಿದ್ದು ಅಲ್ಲಿಯವರೆಗೆ ಸುಮ್ಮನೆ ಕುಳಿತುಕೊಂಡಿದ್ದೆವು ಎಂದು ಹೇಳುತ್ತಾರೆ. ನೋಟಿಸ್ಸು ಬರುವವರರೆಗೂ ಸುಮ್ಮನೆ ಕುಳಿತುಕೊಂಡಿದ್ದೆವು ಎಂದರೆ ಸಾಕ್ಷಿ ನಾವು ಸಮ್ಮನಿದ್ದೆವು ಅಳತೆ ಮಾಡಲು ಬಂದಾಗ ಈ ಅರ್ಜಿ ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಓ.ಎಸ್.ನಂ.86/2013 ರಲ್ಲಿ ಆದಂತಹ ತೀರ್ಪನ್ನು ಎಲ್ಲಿಯು ಪ್ರಶ್ನಿಸಿಲ್ಲ. ಸರ್ವೆ ನಂ.1/1+2+3+4/ಬಿ ರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ ಮತ್ತು ನನಗೆ ಈ ದಾವೆಯಲ್ಲಿ ಅರ್ಜಿ ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸರಿ ಅದೆ.
ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ.